Bruhat Bengaluru Mahanagara Palike

## ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ನೋಡೆಲ್ ಅಧಿಕಾರಿಗಳು/ಸಹಾಯಕ ಅಭಿಯಂತರರ ಕಛೇರಿ ನಾಗಪುರ ಉಪವಿಭಾಗ, ಬಿ.ಬಿ.ಎಂ.ಪಿ,
12ನೇ ಮುಖ್ಯರಸ್ತೆ, 11ನೇ ಕ್ರಾಸ್, ನಾಗಪುರ, ಬಿಬಿಎಂಪಿ ಕಛೇರಿ ಸಂಕೀರ್ಣ ಕಟ್ಟಡ, ಮಹಾಲಕ್ಷ್ಮೀಲೇಔಟ್,ಬೆಂಗಳೂರು-86.

# ದಿನಾಂಕ:-01-01-2022 ರಂದು ನಡೆದ ವಾರ್ಡ್ ಸಂಖ್ಯೆ:67ರ ವಾರ್ಡ್ ಸಮಿತಿ ಸಭೆಯ ನಡವಳಿ

ಉಲ್ಲೇಖ:- (1) ಸಮಿತಿ ಸಭೆ ಸೂಚಿ ಪತ್ರ ಸಂಖ್ಯ:ಬಿ12(5)/ಪಿಆರ್/35/2020-21 ದಿನಾಂಕ:21:09:2020
(2)ಸಭೆ ಸೂಚನಾ ಪತ್ರ ಸಂ. ಸ.ಅ./ವಾ-67/ಪಿ.ಆರ್./35/2021-22 ದಿನಾಂಕ:30-12-2021

| ಕ್ರ.ಸ. | ಶ್ರೀಯುತರ ಹೆಸರು | ಹುದ್ದೆ |
|---|---|---|
| 1. | ಶ್ರೀ. ವಿಶ್ವನಾಥ್ | ಮುಖ್ಯ ಅಭಿಯಂತರರು (ಪಶ್ಚಿಮ) ಬಿಬಿಎಂಪಿ ನೋಡೆಲ್ ಅಧಿಕಾರಿಗಳು ಹಾಗೂ ವಾರ್ಡ್ ಸಮಿತಿ ಅಧ್ಯಕ್ಷರು, ವಾರ್ಡ್ ಸಂಖ್ಯೆ:67 |
| 2. | ಶ್ರೀ. ಬಿ. ಸಿ ರವಿಕುಮಾರ್ | ಸಹಾಯಕ ಅಭಿಯಂತರು ವಾರ್ಡ-67 ಹಾಗು ಸಮಿತಿ ಕಾರ್ಯದರ್ಶಿಗಳು |
| 3. | ಶ್ರೀ.ಎಚ್ ರಂಗನಾಥಾ | ಸಹಾಯಕ ಕಾರ್ಯಪಾಲಕ ಅಭಿಯಂತರರು, ನಾಗಪುರ ಉಪವಿಭಾಗ |
| 4. | ಶ್ರೀಮತಿ. ಗೀತಾ ಕೀನಾಲ್ | ವಾರ್ಡ್ ಸಮಿತಿ ಸದಸ್ಯರು |
| 5. | ಶ್ರೀಮತಿ. ಮಂಜುಳಾ | ವಾರ್ಡ್ ಸಮಿತಿ ಸದಸ್ಯರು |
| 6. | ಶ್ರೀ.ಉದಯ ಶಂಕರ್ | 1ನೇ 'ಆರ್'ಬ್ಲಾಕ್ ಕ್ಷೇಮಾಭಿವೃದ್ದಿ ಸಂಘದ ಅಧ್ಯಕ್ಷರು. |
| 7. | ಶ್ರೀ. ಗಂಗಯ್ಯ | ಹಿರಿಯ ಆರೋಗ್ಯ ಪರೀವಿಕ್ಷಕರು, ವಾರ್ಡ್ ಸಂಖ್ಯೆ-67 |
| 8. | ಶ್ರೀ. ದರ್ಶನ್ | ವಾರ್ಡ್ ಮಾರ್ಷಲ್, ವಾರ್ಡ್ ಸಂಖ್ಯೆ-67 |
| 9. | ಶ್ರೀ. ರಾಜ್‌ಗೋಪಾಲ್ | ಕಂದಾಯ ಪರೀವಿಕ್ಷಕರು, ವಾರ್ಡ್ ಸಂಖ್ಯೆ-67 |
| 10. | ಶ್ರೀ.ಮಂಜುನಾಥ್ | ತೋಟಗಾರಿಕೆ ಇಲಾಖೆ ಮೇಸ್ತ್ರಿ, ಪಶ್ಚಿಮ ವಲಯ. |
| 11. | ಶ್ರೀ. ಆನಂದ್ ಮೂರ್ತಿ | ಸಹಾಯಕ ಅಭಿಯಂತರು, ಎನ್ ಡಬ್ಲ್ಯೂ-1,ಬೆಸ್ಕಂ |
| 12. | ಶ್ರೀ. ಕೆ.ವಿ ಲೋಕೇಶ್ | ಪಶು ಕೆಲಸ ವಿಭಾಗ. |
| 13. | ಶ್ರೀ. ಮಂಜು | ಸಹಾಯಕ ಪೋಲೀಸ್ ಇನ್‌ಸಪೆಕ್ಟರ್,(ಸಂಚಾರಿ) ರಾಜಾಜಿನಗರ ಪೋಲೀಸ್ ಠಾಣೆ. |
| 14. | ಶ್ರೀ.ಭದ್ರಯ್ಯ ವಿ.ಎಸ್ | ಪೋಲಿಸ್ ಪಿ.ಸಿ, (ಸಂಚಾರಿ) ರಾಜಾಜಿನಗರ ಪೋಲೀಸ್ ಠಾಣೆ. |
| 15. | ಶ್ರೀ. ಶ್ರೀನಿವಾಸ್ ಗೌಡ | ಘ.ತ್ಯಾ.ನಿ ಗುತ್ತಿಗೆದಾರರು, ವಾರ್ಡ್ ಸಂಖ್ಯೆ-67 |
| 16. | ಶ್ರೀ.ಗುರುಮೂರ್ತಿ | ವಾರ್ಡ್‌ನ ಘ.ತ್ಯಾ.ನಿ ಸೂಪರ್‌ವೈಸರ್. |

ಪು.ತಿ.ನೋ.



Scanned by CamScanner

ವಾರ್ಡ್ ಸಮಿತಿ ಸಭೆಯ ಕಾರ್ಯದರ್ಶಿಗಳು ಮಾತನಾಡಿ ಜನವರಿ ಮಾಹೆಯ ದಿ:01/01/2022 ರಂದು ಬೆಳಿಗ್ಗೆ 9.30 ಘಂಟೆಗೆ ವಾರ್ಡ್ ಸಮಿತಿ ಸಭೆಯನ್ನು ಕರೆಯಲಾಗಿದ್ದು, ವಾರ್ಡ್ ಅಭಿವೃದ್ಧಿ ಹಾಗೂ ಕುಂದುಕೊರತೆಗಳ ಬಗ್ಗೆ ಚರ್ಚಿಸಲು ಕರೆದಿರುವ ಸಭೆಗೆ ಆಗಮಿಸಿರುವ ಮಾನ್ಯ ವಾರ್ಡ್ ಸಮಿತಿ ಅಧ್ಯಕ್ಷರು, ಮತ್ತು ಸಮಿತಿ ಸದಸ್ಯರಿಗೆ ಸ್ವಾಗತ ಕೋರಿದರು. ಹಾಗೂ ವಾರ್ಡ್ ಸಂಖ್ಯೆ67ರ ವಾಸ್ತವದ ಬಗ್ಗೆ ಕಿರು ಪರಿಚಯವನ್ನು ಮಂಡಿಸಿದರು.

ಮಾನ್ಯ ವಾರ್ಡ್ ಸಮಿತಿ ಅಧ್ಯಕ್ಷರು, ಮಾತನಾಡಿ ಸಮಿತಿಯ ಸದಸ್ಯರು ಮತ್ತು ಸ್ಥಳೀಯ ಸಾರ್ವಜನಿಕರು ತಮ್ಮ ತಮ್ಮ ಅವಹಾಲುಗಳನ್ನು ತಿಳಿಸಬೇಕೆಂದು ತಿಳಿಸಿದ ಹಿನ್ನೆಲೆಯಲ್ಲಿ ಸಮಿತಿಯ ಸದಸ್ಯರು ಈ ಕೆಳಕಂಡಂತೆ ವಾರ್ಡ್‌ನಲ್ಲಿ ಕಂಡುಬಂದಿರುವ ಸಮಸ್ಯೆಗಳನ್ನು ಸಭೆಗೆ ಮಂಡಿಸಿದರು.

## ಸಭೆಯಲ್ಲಿ ಚರ್ಚಿಸಲಾದ ವಿಷಯಗಳು:

| | |
|---|---|
| ಶ್ರೀ. ವಿಶ್ವನಾಥ್<br>ನೋಡೆಲ್ ಅಧಿಕಾರಿಗಳು | ವಾರ್ಡ್‌ನ ಹಿರಿಯ ಆರೋಗ್ಯ ಪರೀವಿಕ್ಷಕರನ್ನು ಉದೇಶಿಸಿ ಕೋವಿಡ್ ಪ್ರಕರಣಗಳನ್ನು ನಿಗ ವಹಿಸಿ ತುರ್ತು ಕ್ರಮ ಕೈಗೊಳಲು ಮತ್ತು ಸುಕ್ತ ಚಿಕಿತ್ಸೆ ಕೊಡಿಸಲು ಕ್ರಮ ಕೈಗೊಳಲು ತಿಳಿಸಿದರು ಮತ್ತು ಕೋವಿಡ್ ಪ್ರಗತಿ ಪರಿಶಿಲನೇ ಮಾಡಿದರು. ಮಾನ್ಯ ನೋಡಲ್ ಅಧಿಕಾರಿಯವರು ಕೋವಿಡ್-19 ಸಾಂಕ್ರಾಮಿಕ ರೋಗದ ಬಗ್ಗೆ ಮಾತನಾಡುತ್ತಾ, ವಾರ್ಡ್-67 ನಾಗಪುರ ಕೋವಿಡ್-19ಗೆ ಸಂಭಂಧಿಸಿದಂತೆ ಮಾಹಿತಿಗಳ ವಿವರಣೆ ನೀಡುವಂತೆ ಸಭೆಯಲ್ಲಿ ತಿಳಿಸಿದರು. |
| ಶ್ರೀ. ಗಂಗಯ್ಯ<br>ಹಿರಿಯ ಆರೋಗ್ಯ ಪರೀವಿಕ್ಷಕರು,<br>ವಾರ್ಡ್ ಸಂಖ್ಯೆ-67 | ವಾರ್ಡ್‌ನಲ್ಲಿ 6 ಕೋವಿಡ್ ಪ್ರಕರಣಗಳು ದಾಕಲಾಗಿದ್ದು ಅವರನ್ನು ಹೋಮ್ ಕ್ವಾರೆಂಟೈನ್ ಮಾಡಲಾಗಿರುತ್ತದೆ, ಹಾಗು ಆರೋಗ್ಯ ಇಲಾಖೆ ಇಂದ ಅಕ್ಕ ಪಕ್ಕ ಮನೆಗಳಿಗೆ ಕೋವಿಡ್ ಟೆಸ್ಟಿಂಗ್ ಮಾಡಲಾಗುತ್ತಿದೆ ಎಂದು ಸಭೆಯಲ್ಲಿ ಮಾಹಿತಿ ಒದಗಿಸಿದರು. |
| | ವಾರ್ಡ್ ವ್ಯಾಪ್ತಿಯಲ್ಲಿ ಕೋವಿಡ್-19 ಸಾಂಕ್ರಾಮಿಕ ರೋಗದಿಂದ ಮೃತಪಟ್ಟ ವ್ಯಕ್ತಿಯ ಕುಟುಂಬ ವರ್ಗದವರಿಗೆ ಸರ್ಕಾರದ ವತಿಯಿಂದ ಪರಿಹಾರ ಧನವನ್ನು ಮಾನ್ಯ ಸಚಿವರು ಹಾಗು ಶಾಸಕರು ಆದ ಶ್ರೀ ಕೆ ಗೋಪಾಲಯ್ಯ ರವರು ಹಾಗು ಎಂ.ಒ.ಎಚ್ ಅಧಿಕಾರಿಗಳ ನೇತೃತ್ವದಲ್ಲಿ ಚೆಕ್‌ಗಳನ್ನು ವಿತರಿಸಲಾಯಿತು ಎಂದು ಶ್ರೀ ಗಂಗಯ್ಯ, ಹಿರಿಯ ಆರೋಗ್ಯ ಪರಿವೀಕ್ಷಕರು ರವರು ಸಭೆಯಲ್ಲಿ ತಿಳಿಸಿದರು. |
| | ವಾರ್ಡ್ ವ್ಯಾಪ್ತಿಯಲ್ಲಿರುವ ನಗರ ಪ್ರಾಥಮಿಕ ಆರೋಗ್ಯ ಕೇಂದ್ರ (ಗೆಳೆಯರ ಬಳಗ) ದಲ್ಲಿ ವ್ಯಾಕ್ಸಿನೇಷನ್ ನೀಡುವ ಕಾರ್ಯಕ್ರಮವನ್ನು ಕೈಗೊಳ್ಳಲಾಗುತ್ತಿದೆ ಹಾಗೂ ವ್ಯಾಕ್ಸಿನ್ ತೆಗೆದುಕೊಳ್ಳುವ ಬಗ್ಗೆ ಅರಿವು ಜಾಗೃತಿ ಮುಡಿಸುವುದು ಮತ್ತು ಆಶಾ ಕಾರ್ಯಕರ್ತೆಯರು ಕಾರ್ಯ ನಿರ್ವಹಿಸುತ್ತಿರುತ್ತಾರೆ ಎಂದು ಸಭೆಯಲ್ಲಿ ತಿಳಿಸಿದರು. |
| ಶ್ರೀಮತಿ. ಮಂಜುಳಾ<br>ವಾರ್ಡ್ ಸಮಿತಿ ಸದಸ್ಯರು | ವಾರ್ಡ್ ಕೇತ್‌ಮಾರನಹಳ್ಳಿಯಲ್ಲಿ ನೀರಿನ ಸಮಸ್ಯೆ ಆಗುತ್ತಿದೆ ಎಂದು ಸಭೆಯಲ್ಲಿ ಪ್ರಸ್ಥಾಪಿಸಿದರು. |
| ಶ್ರೀ. ಬಿ. ಸಿ ರವಿಕುಮಾರ್<br>ಸಹಾಯಕ ಅಭಿಯಂತರು<br>ವಾರ್ಡ್-67 | ವಾರ್ಡ್‌ನ ಬೆಂ.ಜ.ಮಂ ಸಹಾಯಕ ಅಭಿಯಂತರರು ಸಮಿತಿ ಸಭೆಗೆ ಗೈರು ಹಾಜರಾಗಿರುತ್ತಾರೆ. ಆದ್ದರಿಂದ ಸದರಿ ದೂರನ್ನು ದೂರವಾಣಿ ಮೂಖೇನ ಬೆಂ.ಜ.ಮಂ ಸಹಾಯಕ ಅಭಿಯಂತರರಿಗೆ ತಿಳಿಸಿದರು. |
| ಶ್ರೀ.ಉದಯ ಶಂಕರ್<br>1ನೇ 'ಆರ್'ಬ್ಲಾಕ್ ಕ್ಷೇಮಾಭಿವೃದ್ಧಿ<br>ಸಂಘದ ಅಧ್ಯಕ್ಷರು. | ವಾರ್ಡ್‌ನ 1ನೇ ಆರ್ ಬ್ಲಾಕ್‌ನಲ್ಲಿ ನಾಯಿಗಳ ಹಾವಳಿ ಜಾಸ್ತಿಯಾಗಿದೆ ಕ್ರಮವಹಿಸಲು ಪಶು ಕೆಲಸ ವಿಭಾಗದವರಿಗೆ ಮನವಿ ಮಾಡಿದರು. |

ವಿಶ್ವನಾಥ್.ಎ (signature) ಮು.ತಿ.ನೋ.



Scanned by CamScanner

| | |
|---|---|
| ಶ್ರೀ. ಕೆ.ವಿ ಲೋಕೇಶ್<br>ಪಶು ಕೆಲಸ ವಿಭಾಗ. | ವಾರ್ಡ್‌ನ 1ನೇ 'ಆರ್'ಬ್ಲಾಕ್ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷರ ದೂರಿನಂತೆ ಶಸ್ತ್ರ ಚಿಕಿತ್ಸೆ ಆಗಿರದ ನಾಯಿಗಳನ್ನು ಹಿಡಿದು ಶಸ್ತ್ರ ಚಿಕಿತ್ಸೆ ಮಾಡಿ ಪುನಹಃ ಅದೇ ಜಾಗಕ್ಕೆ ಬಿಡಲಾಗುವುದಾಗಿ ಸಭೆಯಲ್ಲಿ ತಿಳಿಸಿದರು. |
| ಶ್ರೀ. ಮಂಜು<br>ಸಹಾಯಕ ಪೊಲೀಸ್<br>ಇನ್‌ಸಪೆಕ್ಟರ್,(ಸಂಚಾರಿ)<br>ರಾಜಾಜಿನಗರ ಪೊಲೀಸ್ ಠಾಣೆ. | ವಾರ್ಡ್‌ನ ಚೈತನ್ಯ ಶಾಲೆ ಹತ್ತಿರ ಕಸದ ಪಾಯಂಟ್ ಇದ್ದು ಕಸವನ್ನು ಲೋಡಿಂಗ್ ಮತ್ತು ಅನ್‌ಲೋಡಿಂಗ್ ಮಾಡುವಾಗ ಕಸದ ಗಾಡಿಗಳನ್ನು ರಸ್ತೆಯಲ್ಲಿ ನಿಲ್ಲಿಸಿ ವಾಹನ ಸಂಚಾರಕ್ಕೆ ತೊಂದರೆ ಉಂಟಾಗುತ್ತಿರುತ್ತದೆ ಎಂದು ಸಭೆಯಲ್ಲಿ ಪ್ರಸ್ತಾಪಿಸಿದರು. |
| ಶ್ರೀ. ವಿಶ್ವನಾಥ್<br>ನೋಡೆಲ್ ಅಧಿಕಾರಿಗಳು | ವಾರ್ಡ್‌ನ ಚೈತನ್ಯ ಶಾಲೆ ಹಿಂಭಾಗದ ಬಿ.ಬಿ.ಎಂ.ಪಿ ಸ್ವತ್ತಿನಲ್ಲಿ ಕಸದ ನಿರ್ವಹಣೆ ಕೆಲಸವನ್ನು ಮಾಡಲಾಗುತ್ತಿತ್ತು ಇಗ ಸದರಿ ಜಾಗವು ಉಚ್ಚ ನ್ಯಾಯಾಲಯದಲ್ಲಿದ್ದು ತಾತ್ಕಾಲಿಕವಾಗಿ ರಸ್ತೆಯಲ್ಲಿ ನಿರ್ವಹಣೆ ಮಾಡಲಾಗುತ್ತಿರುತ್ತದೆ ಇದರಿಂದ ಆದಷ್ಟು ಕಸದ ಗಾಡಿಗಳನ್ನು ರಸ್ತೆಯಲ್ಲಿ ವಾಹನ ಸಂಚಾರಕ್ಕೆ ಅಡ್ಡಿಯಾಗದೆ ಕಸದ ನಿರ್ವಹಣೆ ಮಾಡಲು ಫ.ತ್ಯಾ.ನಿ ಕಿರಿಯ ಆರೋಗ್ಯ ಪರೀವಿಕ್ಷಕರಿಗೆ ಸೂಚಿಸಿದರು. |
| ಶ್ರೀಮತಿ. ಗೀತಾ ಕೀನಾಲ್<br>ವಾರ್ಡ್ ಸಮಿತಿ ಸದಸ್ಯರು | ಮತದಾರರ ಗುರುತಿನ ಚೀಟಿ ಪಡೆಯಲು ಅರ್ಜಿಯನ್ನು ಎಲ್ಲಿ ಪಡೆಯಬೇಕೆಂದು ಸಭೆಯಲ್ಲಿ ಮಾಹಿತಿ ಪಡೆದುಕೊಂಡರು. |
| ಶ್ರೀ. ರಾಜ್‌ಗೋಪಾಲ್<br>ಕಂದಾಯ ಪರೀವಿಕ್ಷಕರು, ವಾರ್ಡ್<br>ಸಂಖ್ಯೆ–67 | ಮತದಾರರ ಗುರುತಿನ ಚೀಟಿ ಪಡೆಯಲು ಆನ್‌ಲೈನ್‌ನಲ್ಲಿ ಅರ್ಜಿತುಂಬಬೇಕು ಎಂದು ಮಾಹಿತಿ ಒದಗಿಸಿದರು. |
| ಶ್ರೀ. ವಿಶ್ವನಾಥ್<br>ನೋಡೆಲ್ ಅಧಿಕಾರಿಗಳು | ವಾರ್ಡ್‌ನಲ್ಲಿ ಆಭಾಂಡೆಡ್ ವಾಹನಗಳ ಬಗ್ಗೆ ಕಲೆ ಹಾಕಿರುವ ಮಾಹಿತಿಯನ್ನು ಸಭಯಲ್ಲಿ ಹಾಜರಿರುವ ರಾಜಾಜಿನಗರ ಸಂಚಾರಿ ಪೋಲಿಸ್ ಠಾಣೆಯವರ ಹತ್ತಿರ ತೆಗೆದುಕೊಂಡಿರುವ ಕ್ರಮದ ಬಗ್ಗೆ ಮಾಹಿತಿ ಕಲೆ ಹಾಕಿದರು ಹಾಗು ಸಂಭಂದಿಸಿದ ಮಾನ್ಯ ಮುಖ್ಯ ಆಯುಕ್ತರ ಸುತ್ತೋಲೆಯನ್ನು ಒದಿದರು ಹಾಗು ಎಲ್ಲಾ ಸದಸ್ಯರಿಗು ವಿವರಗಳನ್ನು ಮನವರಿಕೆ ಮಾಡಲಾಯಿತು. |
| ಶ್ರೀ. ಮಂಜು<br>ಸಹಾಯಕ ಪೊಲೀಸ್<br>ಇನ್‌ಸಪೆಕ್ಟರ್,(ಸಂಚಾರಿ)<br>ರಾಜಾಜಿನಗರ ಪೊಲೀಸ್ ಠಾಣೆ. | ವಾರ್ಡ್‌ನಲ್ಲಿ ಆಭಾಂಡೆಡ್ ವಾಹನಗಳ ಪಟ್ಟಿಯನ್ನು ಪೋಲಿಸ್ ಇಲಾಖಾ ವತಿಯಿಂದ ತಯಾರಿಸಿದ್ದೇವೆ ಹಾಗು ಮುಂದಿನ ಕ್ರಮ ವಹಿಸಲಾಗುವುದಾಗಿ ಸಭೆಯಲ್ಲಿ ತಿಳಿಸಿದರು. |
| ಶ್ರೀ.ಎಚ್ ರಂಗನಾಥಾ<br>ಸಹಾಯಕ ಕಾರ್ಯಪಾಲಕ<br>ಅಭಿಯಂತರರು, ನಾಗಪುರ<br>ಉಪವಿಭಾಗ | ವಾರ್ಡ್‌ನಲ್ಲಿ ಆಭಾಂಡೆಡ್ ವಾಹನಗಳ ಮಾಹಿತಿ ಕಲೆ ಹಾಕಲು ತಮ್ಮ ಇಲಾಖೆ ವತಿಯಿಂದ ಬೇಕಾದ ಮಾಹಿತಿಯನ್ನು ತಮ್ಮ ಕಛೇರಿಯಿಂದ ಪಡೆದುಕೊಳಬಹುದಾಗಿ ಮಾಹಿತಿ ಒದಗಿಸಿದರು. |
| ಶ್ರೀ. ಬಿ. ಸಿ ರವಿಕುಮಾರ್<br>ಸಹಾಯಕ ಅಭಿಯಂತರು<br>ವಾರ್ಡ–67 | ವಾರ್ಡ್‌ನ ಭೋವಿಪಾಳ್ಯ ಹತ್ತಿರ ಕಸ ತೆಗೆಯಬೇಕು ಎಂದು ಸಭೆಯಲ್ಲಿ ಪ್ರಸ್ತಾಪಿಸಿದರು. |
| ಶ್ರೀ.ಗುರುಮೂರ್ತಿ<br>ವಾರ್ಡ್‌ನ ಫ.ತ್ಯಾ.ನಿ<br>ಸೂಪರ್‌ವೈಸರ್. | ವಾರ್ಡ್‌ನ ಸಹಾಯಕ ಅಭಿಯಂತರರ ದೂರಿಗೆ ಸಂಭಂದಿಸಿದಂತೆ ಭೋವಿಪಾಳ್ಯ ಹತ್ತಿರ ಕಸವನ್ನು ತೆರವುಗೊಳಿಸಲಾಗುವುದಾಗಿ ಸಭೆಯಲ್ಲಿ ತಿಳಿಸಿದರು. |
| ಶ್ರೀ. ಬಿ. ಸಿ ರವಿಕುಮಾರ್<br>ಸಹಾಯಕ ಅಭಿಯಂತರು<br>ವಾರ್ಡ–67 | ವಾರ್ಡ್‌ನ ಚಿನ್ನರದಾಮ ಆಟದ ಮೈದಾನದಲ್ಲಿ ಹಾಗು ಎನ್.ಪಿ.ಎಸ್ ಶಾಲೆಯ ಹತ್ತಿರ tree cuttings ತೆಗೆಯಬೇಕು ಎಂದು ಸಭೆಯಲ್ಲಿ ಪ್ರಸ್ತಾಪಿಸಿದರು. |

ಮು.ತಿ.ನೋ.



Scanned by CamScanner

| | |
|---|---|
| ಶ್ರೀ.ಮಂಜುನಾಥ್ ತೋಟಗಾರಿಕೆ ಇಲಾಖೆ ಮೇಸ್ತ್ರಿ, ಪಶ್ಚಿಮ ವಲಯ | ವಾರ್ಡ್‌ನ ಸಹಾಯಕ ಅಭಿಯಂತರರ ದೂರಿಗೆ ಸಂಭಂದಿಸಿದಂತೆ ಕ್ರಮವಹಿಸಲಾಗುವುದಾಗಿ ಸಭೆಗೆ ಭರವಸೆ ನೀಡಿದರು. |
| ಶ್ರೀ. ಬಿ. ಸಿ ರವಿಕುಮಾರ್ ಸಹಾಯಕ ಅಭಿಯಂತರು ವಾರ್ಡ್–67 | ವಾರ್ಡ್‌ನ ಪೈಪ್‌ಲೈನ್ ರಸ್ತೆಯಲ್ಲಿ ಹಾಗು 7ನೇ ಮೈನ್‌ನಲ್ಲಿ ಬೆಂ.ಜ.ಮಂ ರವರು ರಸ್ತೆ ಅಗೆದು ದುರಸ್ತಿ ಮಾಡದೆ ಹಾಗೆಯೆ ಬಿಟ್ಟಿರುತ್ತಾರೆ ಹಾಗು 7ನೇ ಮೈನ್‌ನಲ್ಲಿ ದೂರಸ್ತಿ ಮಾಡಿ ಮಣ್ಣ್ ಅನ್ನು ಹಾಗೆಯೆ ಬಿಟ್ಟಿರುತ್ತಾರೆ ಇದರಿಂದ ವಾಹನ ಸವಾರರಿಗೆ ಬಹಳ ತೊಂದರೆ ಉಂಟಾಗುತ್ತಿರುತ್ತದೆ. |
| ಶ್ರೀ. ವಿಶ್ವನಾಥ್ ನೋಡೆಲ್ ಅಧಿಕಾರಿಗಳು | ವಾರ್ಡ್‌ನ ಸಹಾಯಕ ಅಭಿಯಂತರರ ದೂರಿಗೆ ಸಂಭಂದಿಸಿದಂತೆ ಬೆಂ.ಜ.ಮಂ ರವರು ರಸ್ತೆಯನ್ನು 3 ದಿನಗಳೊಳಗೆ ರಸ್ತೆಯನ್ನು ಸರಿಪಡಿಸಿ ಎಂದಿನಂತೆ ಮಾಡಬೇಕು ಹಾಗು ರಸ್ತೆ ಮೇಲೆ ಬಿಟ್ಟಿರುವ ಹೂಳನ್ನು ತೆರವುಗೊಳಿಸಲು ಸೂಚಿಸಿದರು. |
| ಶ್ರೀಮತಿ. ಗೀತಾ ಕೀನಾಲ್ ವಾರ್ಡ್ ಸಮಿತಿ ಸದಸ್ಯರು | ವಾರ್ಡ್‌ನ 1ನೇ ಬ್ಲಾಕ್ ರಾಜಾಜಿನಗರದಲ್ಲಿ ಜಿಯೋ ಕೇಬಲ್ ಅಳವಡಿಸಲು ರಸ್ತೆ ಅಗೆದು ಸರಿ ಪಡಿಸದೆ ರಸ್ತೆಯಲ್ಲಿ ಗುಂಡಿಗಳಾಗಿರುತ್ತದೆ; ಇದರಿಂದ ವಾಹನ ಸವಾರರಿಗೆ ಹಾಗು ಪಾದಚಾರಿಗಳಿಗೆ ರಸ್ತೆಯಲ್ಲಿ ಸಂಚರಿಸಲು ತೊಂದರೆ ಉಂಟಾಗುತ್ತಿರುತ್ತದೆ. |
| ಶ್ರೀ. ಬಿ. ಸಿ ರವಿಕುಮಾರ್ ಸಹಾಯಕ ಅಭಿಯಂತರು ವಾರ್ಡ್–67 | ವಾರ್ಡ್‌ನ ಸಮಿತಿ ಸದಸ್ಯರ ದೂರಿಗೆ ಸಂಭಂದಿಸಿದಂತೆ ಜಿಯೋ ಕೇಬಲ್ ರವರ ವಿರುದ್ದ ಈಗಾಗಲೇ ಪೋಲಿಸ್ ಠಾಣೆಗೆ ದೂರು ನೀಡಲಾಗಿದೆ ಹಾಗು ಜಿಯೋ ಕೇಬಲ್‌ರವರಿಗೆ ಕೂಡಲೇ ಗುಂಡಿಗಳಿಗೆ ಪ್ಯಾಚ್ ವರ್ಕ್ ಮಾಡುವುದಾಗಿ ದೂರವಾಣಿ ಮೂಖೇನ ತಿಳಿಸಿದರು. |
| ಶ್ರೀಮತಿ. ಗೀತಾ ಕೀನಾಲ್ ವಾರ್ಡ್ ಸಮಿತಿ ಸದಸ್ಯರು | ವಾರ್ಡ್‌ನ 1ನೇ ಬ್ಲಾಕ್ ರಾಜಾಜಿನಗರದ 19ನೇ ಮೈನ್‌ನಲ್ಲಿ ಬೀದಿ ದೀಪಕ್ಕೆ ಅಡ್ಡಲಾಗಿ ಬೆಳೆದಿರುವ ಮರಗಳ ಟ್ರೀಮಿಂಗ್ ಮಾಡಬೇಕು ಎಂದು ಸಭೆಯಲ್ಲಿ ಪ್ರಸ್ತಾಪಿಸಿದರು. |
| ಶ್ರೀ. ಬಿ. ಸಿ ರವಿಕುಮಾರ್ ಸಹಾಯಕ ಅಭಿಯಂತರು ವಾರ್ಡ್–67 | ವಾರ್ಡ್‌ನ ಅರಣ್ಯ ಇಲಾಖೆಗೆ ಸಂಭಂದಿಸಿದವರು ಸಮಿತಿ ಸಭೆಗೆ ಗೈರು ಹಾಜರಾಗಿರುತ್ತಾರೆ. ಆದ್ದರಿಂದ ಸದರಿ ದೂರನ್ನು ದೂರವಾಣಿ ಮೂಖೇನೆ ಮರಗಳ ಟ್ರೀಮಿಂಗ್ ಮಾಡಲು ತಿಳಿಸಿದರು. |
| ಶ್ರೀ.ಉದಯ ಶಂಕರ್ 1ನೇ 'ಆರ್'ಬ್ಲಾಕ್ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷರು. | ವಾರ್ಡ್‌ನ ಮಹಾಲಕ್ಷ್ಮೀಲೇಔಟ್ ಸಿಗ್ನಲ್‌ನಿಂದ ಪಂಚಮುಖಿ ದೇವಸ್ಥಾನದ ಕಡಿಗೆ (ಬಲಕ್ಕೆ) ತಿರುಗುವ ಮಾರ್ಗವನ್ನು ಡಿವೈಡರ್‌ನಿಂದ ಮುಚಿದ್ದು ಅದನ್ನು ಎಂದಿನಂತೆ ಮಾರ್ಗವನ್ನು ತೆರೆಯುವುದರಿಂದ ಸಾರ್ವಜನಿಕರಿಗೆ ಅನುಕುಲವಾಗುವುದು ಎಂದು ಸಭೆಯಲ್ಲಿ ಪ್ರಸ್ತಾಪಿಸಿದರು. |
| ಶ್ರೀ. ವಿಶ್ವನಾಥ್ ನೋಡೆಲ್ ಅಧಿಕಾರಿಗಳು | ವಾರ್ಡ್‌ನ 1ನೇ 'ಆರ್'ಬ್ಲಾಕ್ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷರ ದೂರಿಗೆ ಸಂಭಂದಿಸಿದಂತೆ ಕಾರ್ಯಪಾಲಕ ಅಭಿಯಂತರರು ಟ್ರಾಫಿಕ್ ಇಂಜಿನಿಯರಿಂಗ್ ಸೆಲ್ ರವರಿಗೆ ತಿಳಿಸುವುದಾಗಿ ಸಭೆಯಲ್ಲಿ ತಿಳಿಸಿದರು. |
| ಶ್ರೀ. ಶ್ರೀನಿವಾಸ್ ಗೌಡ ಘ.ತ್ಯಾ.ನಿ ವಾಹನ ಸರಭರಾಜುದಾರರು. | ವಾರ್ಡ‌ನ ಘ.ತ್ಯಾ.ನಿ ಸರಭರಾಜುದಾರರಿಗೆ ಇಲಾಖೆ ವತಿಯಿಂದ ಕಸದ ಬಿಲ್ ಪಾವತಿಮಾಡಿರುವುದಿಲ್ಲ, ಹಾಗು ಕೋವಿಡ್–19 (ಸ್ಯಾನಿಟೈಸೇಷನ್ ಹಾಗು ಸೀಲ್‌ಡೌನ್) ಬಿಲ್ ಪಾವತಿಮಾಡಿರುವುದಿಲ್ಲ. ಇದರಿಂದ ಘ.ತ್ಯಾ.ನಿ ಗುತ್ತಿಗೆದಾರರಿಗೆ ಬಹಳ ಸಮಸ್ಯೆ ಉಂಟಾಗುತ್ತಿರುವುದಾಗಿ ಸಭೆಯಲ್ಲಿ ಪ್ರಸ್ತಾಪಿಸಿದರು. ವಾರ್ಡ್‌ನ ಸಮಿತಿ ಸದಸ್ಯರು ಈ ಕುರಿತು ಗುತ್ತಿಗೆದಾರರಿಗೆ ಹಣ ಪಾವತಿ ಮಾಡಲು ಮನವಿ ಸಲ್ಲಿಸಿದರು. |
| ಶ್ರೀ. ವಿಶ್ವನಾಥ್ ನೋಡೆಲ್ ಅಧಿಕಾರಿಗಳು | ವಾರ್ಡ್‌ನ ಮುಖ್ಯ ರಸ್ತೆಗಳಲ್ಲಿ ತುಂಡಾಗಿರುವ ಒ.ಎಫ್.ಸಿ ಕೇಬಲ್‌ಗಳನ್ನು ಕೂಡಲೇ ತೆರವುಗೊಳಿಸಲು ಸೂಚಿಸಿದರು. |
| ಶ್ರೀ. ಬಿ. ಸಿ ರವಿಕುಮಾರ್ ಸಹಾಯಕ ಅಭಿಯಂತರರು ವಾರ್ಡ್–67 ಹಾಗು ಸಮಿತಿ ಕಾರ್ಯದರ್ಶಿಗಳು. | ವಾರ್ಡ್‌ನ ನೋಡೆಲ್ ಅಧಿಕಾರಿಗಳು ಸೂಚಿಸಿರುವಂತೆ ತುಂಡಾಗಿರುವ ಒ.ಎಫ್.ಸಿ ಕೇಬಲ್‌ಗಳನ್ನು ತೆರವುಗೊಳಿಸಲಾಗುವುದಾಗಿ ಸಭೆಯಲ್ಲಿ ತಿಳಿಸಿದರು. |

ಪು.ತಿ.ನೋ.



Scanned by CamScanner

| | |
|---|---|
| ಶ್ರೀ. ವಿಶ್ವನಾಥ್<br>ನೋಡೆಲ್ ಅಧಿಕಾರಿಗಳು | ಮಾನ್ಯ ನೋಡಲ್ ಅಧಿಕಾರಿಯವರು ಮಾತನಾಡುತ್ತಾ ಮಾನ್ಯ ಮುಖ್ಯ ಆಯುಕ್ತರು ಸೂಚಿಸಿರುವಂತೆ ತೆರಿಗೆ ವಸೂಲಾತಿಗಾಗಿ ತೆಗೆದುಕೊಂಡಿರುವ ಕ್ರಮಗಳ ಬಗ್ಗೆ ಸಭೆಯಲ್ಲಿ ಹೇಳುವಂತೆ ತಿಳಿಸಿದರು. |
| ಶ್ರೀ. ರಾಜ್‌ಗೋಪಾಲ್<br>ಕಂದಾಯ ಪರೀವಿಕ್ಷಕರು, ವಾರ್ಡ್<br>ಸಂಖ್ಯೆ–67 | ಮಾನ್ಯ ಮುಖ್ಯ ಆಯುಕ್ತರ ಸೂಚನೆಯಂತೆ ತೆರಿಗೆ ವಸೂಲಾತಿ ಮಾಡಲಾಗುತ್ತಿದ್ದು, ವಾರ್ಡ್ ವ್ಯಾಪ್ತಿಯಲ್ಲಿ ಸರಿಯಾದ ರೀತಿಯಲ್ಲಿ ತೆರಿಗೆ ಪಾವತಿಯಾಗುತ್ತಿದ್ದು, ತೆರಿಗೆ ಪಾವತಿಸದ ಕೆಲವು ಸಾರ್ವಜನಿಕರಿಗೆ ನೋಟೀಸ್‌ಗಳನ್ನು ಜಾರಿ ಮಾಡಲಾಗಿರುತ್ತದೆ |
| ಶ್ರೀ. ದರ್ಶನ್<br>ವಾರ್ಡ್ ಮಾರ್ಷಲ್, ವಾರ್ಡ್<br>ಸಂಖ್ಯೆ–67 | ಸಭೆಯಲ್ಲಿ ಹಾಜರಿದ್ದ ಮಾರ್ಷಲ್‌ಗಳು ಪ್ರತಿ ದಿನ ಕನಿಷ್ಠ 10 ಜನರಿಗೆ ದಂಡ ವಿಧಿಸಲಾಗುತ್ತಿದ್ದು ಮಾಸ್ಕ್ ಧರಿಸುವಂತೆ ಜಾಗೃತಿ ಮೂಡಿಸಲಾಗುತ್ತಿದೆ ಎಂದು ಸಭೆಯಲ್ಲಿ ತಿಳಿಸಿದರು. |

ವಾರ್ಡ್ ಸಂಬಂಧಿಸಿದ ಎಲ್ಲಾ ಇಲಾಖೆಗಳ ಅಧಿಕಾರಿಗಳು ಸಭಾನಡವಳಿಗಳಿಗೆ ಅನುಸಾರವಾಗಿ ತಮ್ಮ ಇಲಾಖೆಗೆ ಸಂಬಂಧಿಸಿದ ದೂರುಗಳನ್ನು ಪಟ್ಟಿ ಮಾಡಿಕೊಂಡು ಸದರಿ ದೂರುಗಳನ್ನು ಸರಿಪಡಿಸಿರುವ ಬಗ್ಗೆ ಅಥವಾ ತೆಗೆದುಕೊಂಡಿರುವ ಕ್ರಮಗಳ ಬಗ್ಗೆ ದೃಢೀಕೃತ ಮಾಹಿತಿಗಳನ್ನು ತಪ್ಪದೇ ವಾರ್ಡ್ ಕಮಿಟಿ ವಾರ್ಡ್–67 ವಾಟ್ಸ್ ಆಪ್ ಗ್ರೂಪ್ ನಲ್ಲಿ ಮತ್ತು ಪ್ರತೀ ವಾರ್ಡ್ ಸಮಿತಿ ಸಭೆಯಲ್ಲಿ ಮಂಡನೆ ಮಾಡಲು ಸೂಚಿಸುತ್ತಾ, ಸಭೆಯನ್ನು ಮುಕ್ತಾಯ ಗೊಳಿಸಲಾಯಿತು. ಸಭೆಯ ಕೊನೆಯಲ್ಲಿ ಸಮಿತಿ ಕಾರ್ಯದರ್ಶಿ ರವರು ಸಮಿತಿ ಸಭೆಗೆ ಆಗಮಿಸಿರುವ ಎಲ್ಲರಿಗೂ ವಂದಿಸಿದರು.

ಪ್ರತಿಯನ್ನು

1. ಮಾನ್ಯ ವಲಯ ವಿಶೇಷ ಆಯುಕ್ತರು, ಪಶ್ಚಿಮ ವಲಯ ರವರ ಅವಗಾಹನೆಗೆ ತರಲು ಆಪ್ತ ಕಾರ್ಯದರ್ಶಿರವರಿಗೆ ಸಲ್ಲಿಸಿದೆ.
2. ಮಾನ್ಯ ಜಂಟಿ ಆಯುಕ್ತರು, ಪಶ್ಚಿಮ ವಲಯ ರವರ ಅವಗಾಹನೆಗೆ ತರಲು ಆಪ್ತ ಕಾರ್ಯದರ್ಶಿರವರಿಗೆ ಸಲ್ಲಿಸಿದೆ.
3. ಮಾನ್ಯ ಮುಖ್ಯ ಅಭಿಯಂತರರು, ಪಶ್ಚಿಮ ವಲಯ ರವರ ಅವಗಾಹನೆಗೆ ಸಲ್ಲಿಸಿದೆ.
4. ಮಾನ್ಯ ಆರೋಗ್ಯ ಅಧಿಕಾರಿಗಳು, ಪಶ್ಚಿಮ ವಲಯ ರವರ ಅವಗಾಹನೆಗೆ ತರಲು ಮತ್ತು ಅಗತ್ಯ ಕ್ರಮಕ್ಕಾಗಿ ಸಲ್ಲಿಸಿದೆ.
5. ಮಾನ್ಯ ಅಧೀಕ್ಷಕ ಅಭಿಯಂತರರು, (ಘನತ್ಯಾಜ್ಯ ನಿರ್ವಹಣೆ) ಕೇಂದ್ರ ರವರ ಅವಗಾಹನ ಸಲ್ಲಿಸಿದೆ.
6. ಮಾನ್ಯ ಅರಣ್ಯಾಧಿಕಾರಿಗಳು, ಅರಣ್ಯ ವಿಭಾಗ ರವರಿಗೆ ಅವಗಾಹನೆಗೆ ತರಲು ಮತ್ತು ಅಗತ್ಯ ಕ್ರಮಕ್ಕಾಗಿ ಆಪ್ತ ಸಹಾಯಕರವರಿಗೆ ಸಲ್ಲಿಸಿದೆ.
7. ಮಾನ್ಯ ಅಧೀಕ್ಷಕರು, ತೋಟಗಾರಿಕೆ ಇಲಾಖೆ ರವರ ಅವಗಾಹನೆಗೆ ತರಲು ಹಾಗೂ ಅಗತ್ಯ ಕ್ರಮಕ್ಕಾಗಿ ಸಹಾಯಕರಿಗೆ ಸಲ್ಲಿಸಿದೆ.
8. ಆರೋಗ್ಯ ಅಧಿಕಾರಿಗಳು, (ಪಶ್ಚಿಮ ವಲಯ) ರವರ ಮಾಹಿತಿಗಾಗಿ ಮತ್ತು ಅಗತ್ಯ ಕ್ರಮಕ್ಕಾಗಿ ಸಲ್ಲಿಸಿದೆ.
9. ಕಾರ್ಯಪಾಲಕ ಅಭಿಯಂತರರು, ಮಹಾಲಕ್ಷ್ಮೀಪುರಂ ವಿಭಾಗ ರವರ ಮಾಹಿತಿಗಾಗಿ ಮತ್ತು ಅಗತ್ಯ ಕ್ರಮಕ್ಕಾಗಿ ಸಲ್ಲಿಸಿದೆ.
10. ಕಂದಾಯ ಅಧಿಕಾರಿಗಳು, ಮಹಾಲಕ್ಷ್ಮೀಪುರಂ ವಿಭಾಗ ರವರ ಮಾಹಿತಿಗಾಗಿ ಮತ್ತು ಅಗತ್ಯ ಕ್ರಮಕ್ಕಾಗಿ ಸಲ್ಲಿಸಿದೆ.
11. ಸಹಾಯಕ ಕಾರ್ಯಪಾಲಕ ಅಭಿಯಂತರರು ನಾಗಪುರ ಉಪವಿಭಾಗ ರವರಿಗೆ ಸೂಕ್ತ ಕ್ರಮವಹಿಸಲು ಸಲ್ಲಿಸಿದೆ.
12. ಸಹಾಯಕ ಕಂದಾಯ ಅಧಿಕಾರಿಗಳು ನಾಗಪುರ ಉಪವಿಭಾಗ ರವರ ಮಾಹಿತಿಗಾಗಿ ಮತ್ತು ಅಗತ್ಯ ಕ್ರಮಕ್ಕಾಗಿ ಸಲ್ಲಿಸಿದೆ.
13. ಸಹಾಯಕ ಕಾರ್ಯಪಾಲಕ ಅಭಿಯಂತರರು (ಪರಿಸರ ವಿಭಾಗ) ನಾಗಪುರ ಉಪವಿಭಾಗ ರವರ ಅಗತ್ಯ ಕ್ರಮಕ್ಕಾಗಿ ಸಲ್ಲಿಸಿದೆ.
14. ಕಾರ್ಯಪಾಲಕ ಅಭಿಯಂತರರು, ವಿದ್ಯುತ್ ಪಶ್ಚಿಮ ವಿಭಾಗ ರವರಿಗೆ ಸೂಕ್ತ ಕ್ರಮ ವಹಿಸಲು ಸಲ್ಲಿಸಿದೆ.
15. ಎಲ್ಲಾ ಸಂಬಂಧಪಟ್ಟವರ ಮಾಹಿತಿಗಾಗಿ ಮತ್ತು ಅಗತ್ಯ ಕ್ರಮಕ್ಕಾಗಿ ಸಲ್ಲಿಸಿದೆ.
16. ಕಛೇರಿಯ ಕಡತಕ್ಕೆ.

ಕಾರ್ಯದರ್ಶಿ ಹಾಗೂ
ಸಹಾಯಕ ಅಭಿಯಂತರರು, ವಾರ್ಡ್– 67
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಅಧ್ಯಕ್ಷರು ಹಾಗೂ
ನೋಡಲ್ ಅಧಿಕಾರಿಗಳು ವಾರ್ಡ್– 67
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ



Scanned by CamScanner